ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22372738, E-mail: nregs-kar@nic.in

ಸಂಖ್ಯೆ: ಗ್ರಾಅಪ:536:ಉಖಾಯೋ:2015

ದಿನಾಂಕ: 02.04.2016

## ಪ್ರಕಟಣೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಓಂಬುಡ್ಸ್‌ಮನ್‌ರವರು ಹೊರಡಿಸುವ ಆದೇಶಗಳು / ಶಿಫಾರಸ್ಸುಗಳಿಂದ ಬಾಧಿತರಾದವರು ಸಲ್ಲಿಸುವ ಮನವಿಗಳನ್ನು ಪರಿಶೀಲಿಸಿ ಇತ್ಯರ್ಥಗೊಳಿಸುವ ಸಲುವಾಗಿ ಮೂವರು ಸದಸ್ಯರನ್ನೊಳಗೊಂಡ ಒಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದ್ದು, ಪ್ರಸ್ತುತ ಇಬ್ಬರು ಸದಸ್ಯರು ಕಾರ್ಯನಿರ್ವಹಿಸುತ್ತಿರುವರು. ಒಬ್ಬ ಸದಸ್ಯರ ಹುದ್ದೆ ಖಾಲಿ ಇದ್ದು ಮತ್ತೊಂದು ಹುದ್ದೆಯು ಖಾಲಿಯಾಗುವ ಸಂಭವವಿರುತ್ತದೆ. ಈ (2)ಎರಡು ಸದಸ್ಯರ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಓಂಬುಡ್ಸ್‌ಮನ್ ಆಯ್ಕೆ ಸಮಿತಿಯು ದಿನಾಂಕ:23.02.2016 ರಂದು ಜರುಗಿದ ಸಭೆಯಲ್ಲಿ ನಿರ್ಣಯಿಸಿರುವುದನ್ನನುಸರಿಸಿ ಅರ್ಜಿಗಳನ್ನು ಆಹ್ವಾನಿಸಿದೆ.

ಒಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರಾಗಿ ಆಯ್ಕೆಗೊಳ್ಳುವವರು ಈ ಕೆಳಕಂಡ ಅಗತ್ಯ ಅರ್ಹತೆಗಳನ್ನು ಹೊಂದಿದವರಾಗಿರಬೇಕು.

1. ಅ) ಶೈಕ್ಷಣಿಕ ಕ್ಷೇತ್ರ (ಬೋಧನೆ) ಆ) ನಾಗರೀಕ ಸೇವೆ ಇ) ನಾಗರೀಕ ಸಂಘ ಸಂಸ್ಥೆಗಳು, ಇವುಗಳಲ್ಲಿ ಯಾವುದಾದರೊಂದು ಕ್ಷೇತ್ರದಲ್ಲಿ ಕಡೆಯ ಪಕ್ಷ 30 ವರ್ಷಗಳ ಸೇವಾನುಭವ ಇರಬೇಕು.
2. ಶ್ರೇಷ್ಠತಮ ಮತ್ತು ನಿಷ್ಕಳಂಕ ಸೇವೆ ಸಲ್ಲಿಸಿರಬೇಕು.
3. ದೈಹಿಕ ಚಟುವಟಿಕೆ ಹೊಂದಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕ್ಷೇತ್ರ ಭೇಟಿ ಕೈಗೊಳ್ಳಲು ಸಮರ್ಥರಿರಬೇಕು.
4. ರಾಜಕೀಯ ಪಕ್ಷದ ಮತ್ತು ನಿಷೇಧಿತ ಸಂಘ ಸಂಸ್ಥೆಗಳ ಸದಸ್ಯರಾಗಿರಬಾರದು.
5. ಗರಿಷ್ಠ ವಯಸ್ಸು 66 ವರ್ಷಗಳು ಮೀರಿರಬಾರದು.

ಒಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರ ನೇಮಕಾತಿಯು ಮೊದಲಿಗೆ 2 ವರ್ಷದ ಅವಧಿಯದ್ದಾಗಿರುತ್ತದೆ.

ಕೇಂದ್ರ/ರಾಜ್ಯ ಸರ್ಕಾರದ ಆದೇಶಗಳ ಅನುಸಾರ ಸಿಟ್ಟಿಂಗ್ ಫೀಜು, ಸಂಭಾವನೆ ಇತ್ಯಾದಿಗಳನ್ನು ನೀಡಲಾಗುವುದು.

ಒಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರಾಗಿ ಬೆಂಗಳೂರು ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇರುವ ವ್ಯಕ್ತಿಗಳು ಇಲಾಖೆಯ ವೆಬ್‌ಸೈಟ್ www.karnregs.kar.nic.in ನಲ್ಲಿ ನಿಗಧಿತ ನಮೂನೆಯ ಅರ್ಜಿಯನ್ನುಅವರೋಹಣ (download) ಮಾಡಿಕೊಂಡು, ತಮ್ಮ ವ್ಯಕ್ತಿತ್ವ ಪರಿಚಯದ, ಕನಿಷ್ಠ 30 ವರ್ಷಗಳು ಕಾರ್ಯನಿರ್ವಹಿಸಿದ ಅನುಭವದ ದಾಖಲೆ ಹಾಗೂ ಇತರೆ ಅವಶ್ಯಕ ಎಲ್ಲಾ ಪೂರಕ ದಾಖಲೆಗಳೊಂದಿಗೆ **ದಿನಾಂಕ:30.04.2016 ರೊಳಗೆ** ತಲುಪುವಂತೆ ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, 3ನೇ ಹಂತ, 2ನೇ ಮಹಡಿ, ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರಿಗೆ ಸಲ್ಲಿಸುವುದು. ನಿಗಧಿ ಪಡಿಸಿರುವ ದಿನಾಂಕದ ನಂತರ ತಡವಾಗಿ ಸ್ವೀಕೃತವಾಗುವ ಅಥವಾ ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು (ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರನ್ನು ಸಂಪರ್ಕಿಸಬಹುದಾಗಿದೆ, ದೂರವಾಣಿಸಂಖ್ಯೆ:080-22342163)

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.